ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ವಿರಾಜಪೇಟೆ

**ಉಪಸ್ಥಿತರುಃ ಸಂತೋಷ ಕೊಠಾರಿ,**

**ಬಿ.ಎ.ಎಲ್., ಎಲ್.ಎಲ್.ಬಿ.,**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು** ಜೆ ಎಂ ಎಫ್ ಸಿ ನ್ಯಾಯಾಲಯ, ವಿರಾಜಪೇಟೆ

# ಸಿ. ಸಿ. ನಂ. 350/2019

ಪಿರ್ಯಾದಿಃ ಶ್ರೀ ಮಹಮ್ಮದ್ ಖಲೀಂ , ತಂದೆಃ ಸಿದ್ದೀಕ್, 30 ವರ್ಷ,
ವಾಸಃ ಗೋಣಿಕೊಪ್ಪ ರಸ್ತೆ, ವಿರಾಜಪೇಟೆ ಪಟ್ಟಣ,
ಕೊಡಗು ಜಿಲ್ಲೆ.

(ಶ್ರೀ ಸಿ.ಕೆ ಪೂವಯ್ಯ, ವಕೀಲರು,ವಿರಾಜಪೇಟೆ.)

**ವಿರುದ್ಧ**

ಆರೋಪಿಃ ಶ್ರೀ ಅಜಾರ್ , ತಂದೆಃನಜೀರ್ ,
ವಾಸಃ 3 ನೇ ಬ್ಲಾಕ್, ದಖನ್ನಿ ಮೊಹಲ್ಲಾ, ವಿರಾಜಪೇಟೆ, ದ.ಕೊಡಗು.

(ಶ್ರೀ ಡಿ.ಸಿ.ಧ್ರುವಕುಮಾರ್, ವಕೀಲರು, ವಿರಾಜಪೇಟೆ)

**::ದಂಡ ಪ್ರಕ್ರಿಯಾ ಸಂಹಿತೆ ವಿಧಿ 313 (1)(ಬಿ) ರಡಿ ದಾಖಲಿಸಿದ ಆರೋಪಿತರ ಹೇಳಿಕೆ ::**

ಪ್ರಶ್ನೆಃ 1 ಪಿರ್ಯಾದುದಾರರ ಸಾಕ್ಷ್ಯವನ್ನು ತಿಳಿದುಕೊಂಡಿರುವಿರಾ?

ಉತ್ತರಃ ಹೌದು.

ಪ್ರಶ್ನೆಃ 2 ಪ್ರಾಸಾ-1 ಶ್ರೀಮಹಮ್ಮದ್ ಖಲೀಂರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿಯಾದ ಶ್ರೀಅಜಾರ್ ರವರು ರೂ 3,50,000/- ವನ್ನು ಜವಳಿ ವ್ಯಾಪಾರದ ಸಲುವಾಗಿ ಸಾಲ ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ ನಿಜ

ಪ್ರಶ್ನೆಃ 3 ಪ್ರಾಸಾ 1 ರವರು ಮುಂದುವರೆದು, ಸದರಿ ಸಾಲ ಮರು ಪಾವತಿ ಮಾಡುವ ಸಲುವಾಗಿ ಆರೋಪಿಯಾದ ನೀವು ಚೆಕ್ ನಂಬರ್ 786570 ದಿನಾಂಕ 04.02.2019 ರಂದು ರೂ.3,50,000/- ವನ್ನು ನಮೂದಿಸಿ, ಸದರಿ ಸಾಲವನ್ನು ತೀರಿಸುವ ಸಲುವಾಗಿ ಸಿಂಡಿಕೇಟ್ ಬ್ಯಾಂಕ್, ವಿರಾಜಪೇಟೆ ಶಾಖೆಯ ತಮ್ಮ ಖಾತೆಗೆ ಸಂಬಂಧಿಸಿದ ಚೆಕ್ಕನ್ನು ನೀಡಿದ್ದು, ಅದನ್ನು ನಗದೀಕರಿಸಿಕೊಂಡು ಸಾಲದ ಹಣವನ್ನು

04/09/23

ಮರುಪಾವತಿ ಮಾಡಿಕೊಳ್ಳಬೇಕೆಂದು ಆರೋಪಿ ನನಗೆ ತಿಳಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ ಸುಳ್ಳು

ಪ್ರಶ್ನೆಃ 4 ಫ್ರಾಸಾ 1 ರವರು ಮುಂದುವರೆದು, ನಿಮ್ಮ ಕೋರಿಕೆಯ ಮೇರೆಗೆ ಸದರಿ ಚೆಕ್‌ನ್ನು ಸಿಂಡಿಕೇಟ್ ಬ್ಯಾಂಕ್, ವಿರಾಜಪೇಟೆ ಶಾಖೆಯಲ್ಲಿ ನಗದೀಕರಿಸಲು ಸಲ್ಲಿಸಿದೆ ಆದರೆ ಆರೋಪಿಯ ಬ್ಯಾಂಕ್ ನವರು "Funds insufficient" ಎಂಬ ಕಾರಣ ನೀಡಿ ಚೆಕ್‌ಗಳನ್ನು ಅಮಾನ್ಯಗೊಳಿಸಿ ದಿನಾಂಕಃ 20.03.2019 ರ ಮೆಮೋದೊಂದಿಗೆ ಹಿಂತಿರುಗಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ ಸುಳ್ಳು

ಪ್ರಶ್ನೆಃ 5 ಫ್ರಾಸಾ 1 ರವರು ಮುಂದುವರೆದು, ಚೆಕ್ ಅಮಾನ್ಯಗೊಂಡು ಮರಳಿ ಬಂದ ಬಳಿಕ ದಿನಾಂಕಃ 28.03.2019 ರಂದು ಆರೋಪಿಗೆ ತನ್ನ ವಕೀಲರ ಮೂಲಕ ನೋಂದಾಯಿತ ಅಂಚೆಯಲ್ಲಿ ನೋಟೀಸ್ ಕಳುಹಿಸಿ ಚೆಕ್‌ನಲ್ಲಿನ ಹಣವನ್ನು ಪಾವತಿ ಮಾಡಬೇಕೆಂದು ತಗಾದೆ ಮಾಡಿರುತ್ತೇನೆ ಆದರೂ ಸಹಾ ಆರೋಪಿಯು ಚೆಕ್‌ನ ಬಾಬ್ತು ಹಣವನ್ನು ಪಾವತಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ ಸುಳ್ಳು

ಪ್ರಶ್ನೆಃ 6 ಫ್ರಾಸಾ 1 ರವರು ಮುಂದುವರೆದು, ಆರೋಪಿ ನನಗೆ ವಂಚನೆ ಮಾಡುವ ಉದ್ದೇಶದಿಂದ, ತಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದೇ ಇದ್ದರೂ ಚೆಕ್‌ನ್ನು ನೀಡಿರುತ್ತಾರೆ ಮತ್ತು ಚೆಕ್ ಹಣವನ್ನು ಪಾವತಿಸಿರುವುದಿಲ್ಲ ಎಂದು ತಿಳಿಸಿ ನಿಪಿ-1 ರಿಂದ ನಿಪಿ-5 ನ್ನು ಗುರುತಿಸಿಕೊಂಡಿದ್ದಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ ಸುಳ್ಳು

24/09/23

ಪ್ರಶ್ನೆಃ 7 ಮೇಲೆ ಓದಿ ಹೇಳಲಾದ ಪ್ರಶ್ನೆಗಳು ನಿಮಗೆ ಅರ್ಥವಾಯಿತೆ?

ಉತ್ತರಃ ಹೌದು.

ಪ್ರಶ್ನೆಃ 8 ಈ ಮೊಕದ್ದಮೆ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ?

ಉತ್ತರಃ ತಪ್ಪು ಮಾಡಿರುವುದಿಲ್ಲ.

ಪ್ರಶ್ನೆಃ 9 ನಿಮ್ಮ ಪರವಾಗಿ ಅಭಿರಕ್ಷಣಾ ಸಾಕ್ಷ್ಯ ಇದೆಯೇ? ಇದ್ದರೆ ಮಂಡಿಸಿ.

ಉತ್ತರಃ ಸಾಕ್ಷಿ ವಿಚಾರಣೆಯಾಗುತ್ತದೆ.

(ಮೇಲಿನ ಎಲ್ಲಾ ಪ್ರಶ್ನೆಗಳನ್ನು ಆರೋಪಿಗೆ ಓದಿ, ತಿಳಿ ಹೇಳಿದ ನಂತರ ಆರೋಪಿ ಅದನ್ನು ಅರ್ಥೈಸಿಕೊಂಡು ನಂತರ ನೀಡಿದ ಉತ್ತರಗಳನ್ನು ನಾನೇ ಸ್ವತಃ ದಾಖಲು ಮಾಡಿದ್ದೇನೆ. ಸದರಿ ದಾಖಲೆಯು ಸರಿಯಾದುದು ಮತ್ತು ನಿಜವಾದುದು ಎಂದು ದೃಡೀಕರಿಸುತ್ತೇನೆ.)

(ಸಂತೋಷ ಕೊಠಾರಿ)

ದಿನಾಂಕಃ 04.09.2023.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ವಿರಾಜಪೇಟೆ.